ನಮ್ಮ ಸುತ್ತಲಿನ ಸಾಮಗ್ರಿಗಳು, 6ನೇ ತರಗತಿ ವಿಜ್ಞಾನ ಅಧ್ಯಾಯ 6 ನೋಟ್ಸ್ ಪ್ರಶ್ನೋತ್ತರಗಳು

# ನಮ್ಮ ಸುತ್ತಲಿನ ಸಾಮಗ್ರಿಗಳು

**6ನೇ ತರಗತಿ ವಿಜ್ಞಾನ ಅಧ್ಯಾಯ 6 ನೋಟ್ಸ್ ಪ್ರಶ್ನೋತ್ತರಗಳು**

೧. ನಿಮ್ಮ ಅಡುಗೆಮನೆಗೆ ಭೇಟಿ ನೀಡಿ ಮತ್ತು ನಿಮ್ಮ ಪೋಷಕರು ವಿವಿಧ ಖಾದ್ಯಗಳನ್ನು ಹೇಗೆ ಜೋಡಿಸಿದ್ದಾರೆ ಎಂಬುದನ್ನು ಗಮನಿಸಿ. ಉತ್ತಮ ವಿಂಗಡಣೆ ವಿಧಾನವನ್ನು ನೀವು ಸೂಚಿಸಬಹುದೇ? ಅದನ್ನು ನಿಮ್ಮ
ನೋಟ್ ಪುಸ್ತಕದಲ್ಲಿ ಬರೆಯಿರಿ.

ತರಕಾರಿ ಪುಟ್ಟಿಗಳನ್ನು ಗಾಳಿ ಆಡುವ ಹಾಗೆ ಇರುವ ಬುಟ್ಟಿಗಳಲ್ಲಿ ಒಂದು ಕಡೆ ಜೋಡಿಸಬೇಕು. ಎಲ್ಲಾ ಧಾನ್ಯಗಳನ್ನು ಮುಖ್ಯವಾಗಿ ಅಕ್ಕಿ, ಗೋಧಿ ಹಿಟ್ಟು ಮತ್ತು ಅಕ್ಕಿ ಹಿಟ್ಟುಗಳನ್ನು ಪಾರದರ್ಶಕವಾಗಿ ಕಾಣುವ ದೊಡ್ಡ ಪಾತ್ರೆಗಳಲ್ಲಿ ಸಂಗ್ರಹಿಸಬಹುದು. ಉಪ್ಪು ಸಕ್ಕರೆ ಹುಣಸೆಹಣ್ಣು ಬೇಳೆ ಕಾಳುಗಳು ಬೇಳೆಗಳು ಮಸಾಲೆ ಪದಾರ್ಥಗಳು ಮುಂತಾದ ಸಣ್ಣ ಪುಟ್ಟ ಪದಾರ್ಥಗಳನ್ನೆಲ್ಲ ಪಾರದರ್ಶಕವಾದ ಸಣ್ಣ ಸಣ್ಣ ಡಬ್ಬಿ ಗಳಲ್ಲಿ ಇಟ್ಟು ವ್ಯವಸ್ಥಿತವಾಗಿ ಜೋಡಿಸಬೇಕು. 15 ದಿನಕ್ಕೊಮ್ಮೆ ಒರೆಸಿ ಕ್ಲೀನ್ ಮಾಡಬೇಕು. ಇಟಾಲಿಯನ್ ಕಿಚನ್ ಇದ್ದಲ್ಲಿ ಕೂಡ ಒಳ್ಳೆಯದು. ಜಿರಳೆಗಳಾಗದಂತೆ ಜಾಗೃತೆ ವಹಿಸಬೇಕು.

೨. ಕಲಸಿದ ಅಕ್ಷರಗಳನ್ನು ಸರಿಯಾಗಿ ಹೊಂದಿಸಿ (ಕಂಬಸಾಲು I) ಮತ್ತು ಅವುಗಳ ಗುಣಗಳೊಂದಿಗೆ (ಕಂಬಸಾಲು II) ಜೋಡಿಸಿ.

ಕಂಬಸಾಲು-I ಕಂಬಸಾಲು-II

i) ಸಾಮಗ್ರಿ ......b) ಸ್ಥಳವನ್ನು ಆಕ್ರಮಿಸುತ್ತದೆ ಮತ್ತು ದ್ರವ್ಯರಾಶಿಯನ್ನು ಹೊಂದಿದೆ.

ii) ವಿಲೀನಗೊಳ್ಳುವ.......ಜ) ಸಂಪೂರ್ಣವಾಗಿ ನೀರಿನಲ್ಲಿ ಬೆರೆಯುತ್ತದೆ.

iii) ಪಾರದರ್ಶಕ..........ಚಿ) ಅದರ ಮೂಲಕ ವಸ್ತುಗಳನ್ನು ಸ್ಪಷ್ಟವಾಗಿ ನೋಡಬಹುದು

iv) ಹೊಳಪು.......ಛಿ) ಹೊಳೆಯುವ ಮೇಲ್ಮೈ

೩. ಅಂಗಡಿಗಳಲ್ಲಿ ಮತ್ತು ಮನೆಯಲ್ಲಿ ಸಾಮಗ್ರಿಗಳನ್ನು ಸಂಗ್ರಹಿಸಲು ಬಳಸುವ ಪಾತ್ರೆಗಳು ಸಾಮಾನ್ಯವಾಗಿ
ಪಾರದರ್ಶಕವಾಗಿರುತ್ತವೆ. ಇದಕ್ಕೆ ಕಾರಣಗಳನ್ನು ಕೊಡಿ.

ಪಾರದರ್ಶಕ ಪಾತ್ರಗಳಲ್ಲಿ ಇರುವ ವಸ್ತುಗಳು ಯಾವುವು ಎಂಬುದನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಇದರಿಂದ ಸಮಯ ಮತ್ತು ಶ್ರಮ ಉಳಿತಾಯ ಆಗುತ್ತದೆ. ಅಪಾರ ದರ್ಶಕ ಪಾತ್ರೆಗಳಿದ್ದಲ್ಲಿ ಒಳಗೆ ಯಾವ ವಸ್ತು ಇದೆ ಎಂಬುದು ತಿಳಿಯುವುದಿಲ್ಲ.

ಅಂಗಡಿಗಳಲ್ಲಿ ಗಿರಾಕಿಗಳಿಗೆ ವಸ್ತು ಕಂಡರೆ ಅದನ್ನು ಕೊಳ್ಳುವ ಮನಸ್ಸಾಗುತ್ತದೆ. ಮತ್ತು ದೂರದಿಂದಲೇ ವಸ್ತುವನ್ನು ನೋಡಿ ಕೊಳ್ಳಲು ಬರುತ್ತಾರೆ. ಇಲ್ಲವಾದಲ್ಲಿ ಯಾವ ವಸ್ತುಗಳ ಅಂಗಡಿ ಎನ್ನುವುದೇ ತಿಳಿಯುವುದಿಲ್ಲ.

೪. ಕೆಳಗೆ ಕೊಟ್ಟಿರುವ ಹೇಳಿಕೆಗಳು ಸರಿಯೇ [T] ಅಥವಾ ತಪ್ಪೇ [F] ಎಂದು ತಿಳಿಸಿ. ತಪ್ಪಾದ ಹೇಳಿಕೆಗಳನ್ನು
ಸರಿಪಡಿಸಿ.

i) ಮರವು ಅರೆಪಾರದರ್ಶಕವಾಗಿದ್ದರೆ, ಗಾಜು ಅಪಾರದರ್ಶಕವಾಗಿರುತ್ತದೆ. [ F]

ಸರಿಯಾದ ಹೇಳಿಕೆ
ಮರವು ಅಪಾರ ದರ್ಶಕ ವಾಗಿದ್ದರೆ ಗಾಜು ಪಾರದರ್ಶಕ ವಾಗಿರುತ್ತದೆ.

ii) ಅಲ್ಯುಮಿನಿಯಂ ಹಾಳೆಯು ಹೊಳಪನ್ನು ಹೊಂದಿರುತ್ತದೆ. ಆದರೆ, ರಬ್ಬರ್ ಹೊಳಪನ್ನು

ಹೊಂದಿರುವುದಿಲ್ಲ. [T ]

iii) ಸಕ್ಕರೆ ನೀರಿನಲ್ಲಿ ವಿಲೀನವಾಗುತ್ತದೆ. ಆದರೆ, ಮರದ ಹೊಟ್ಟು ವಿಲೀನವಾಗುವುದಿಲ್ಲ.
[T ]

iv) ಸೇಬು ಒಂದು ದ್ರವ್ಯವಾಗಿದೆ. ಏಕೆಂದರೆ, ಅದು ಯಾವುದೇ ಸ್ಥಳವನ್ನು ಆಕ್ರಮಿಸುವುದಿಲ್ಲ ಮತ್ತು
ದ್ರವ್ಯರಾಶಿಯನ್ನು ಹೊಂದಿರುತ್ತದೆ. [F ]

ಸರಿಯಾದ ಹೇಳಿಕೆ
ಸೇಬು ಒಂದು ದ್ರವ್ಯವಾಗಿದೆ ಏಕೆಂದರೆ ಅದು ಸ್ಥಳವನ್ನು ಆಕ್ರಮಿಸುತ್ತದೆ ಮತ್ತು ದ್ರವ್ಯರಾಶಿಯನ್ನು ಹೊಂದಿದೆ.

೫. ಮರ, ಕಬ್ಬಿಣ, ಪ್ಲಾಸ್ಟಿಕ್, ಬಿದಿರು, ಸಿಮೆಂಟ್ ಮತ್ತು ಕಲ್ಲುಗಳಂತಹ ವಿವಿಧ ಸಾಮಗ್ರಿಗಳಿಂದ ಮಾಡಿದ ಕುರ್ಚಿಗಳನ್ನು ನಾವು ನೋಡಿದ್ದೇವೆ. ಕುರ್ಚಿಗಳನ್ನು ತಯಾರಿಸಲು ಬಳಸಬಹುದಾದ ಸಾಮಗ್ರಿಗಳ
ಕೆಲವು ಅಪೇಕ್ಷಣೀಯ ಗುಣಗಳು ಈ ಕೆಳಗಿನಂತಿವೆ. ಕುರ್ಚಿಗಳನ್ನು ತಯಾರಿಸಲು ಬಳಸುವ ಯಾವ ಸಾಮಗ್ರಿಗಳು ಈ ಗುಣಗಳನ್ನು ಹೆಚ್ಚು ಒಳಗೊಂಡಿರುತ್ತವೆ?

(i) ಗಡಸುತನ (ದೀರ್ಘಕಾಲದ ಬಳಕೆಯ ನಂತರವೂ ಕುಳಿತುಕೊಳ್ಳುವಾಗ ಬಾಗುವುದಿಲ್ಲ ಅಥವಾ ಅಲುಗಾಡುವುದಿಲ್ಲ).
(ii) ಹಗುರ (ಎತ್ತಲು ಅಥವಾ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕೊಂಡೊಯ್ಯಲು ಸುಲಭ).
(iii)ಚಳಿಗಾಲದಲ್ಲಿ ಕುಳಿತುಕೊಳ್ಳುವಾಗ ತುಂಬಾ ಚಳಿಯ ಅನುಭವವಾಗುವುದಿಲ್ಲ.
(iv) ನಿಯತವಾಗಿ ಸ್ವಚ್ಛಗೊಳಿಸಬಹುದು ಮತ್ತು ದೀರ್ಘಕಾಲದ ಬಳಕೆಯ ನಂತರವೂ ಹೊಸದಾಗಿ ಕಾಣುವಂತೆ ಮಾಡಬಹುದು.

ಕಬ್ಬಿಣ, ಮರ, ಫೈಬರ್, ಬಿದಿರು ಗಳಿಂದ ಮಾಡಿದ ಕುರ್ಚಿಗಳು ಗಡಸುತನವನ್ನು ಹೊಂದಿರುತ್ತವೆ.
ಮರ ಮತ್ತು ಫೈಬರ್ ಹಾಗೂ ಬಿದಿರಿನಿಂದ ಮಾಡಿದ ಕುರ್ಚಿಗಳು ಹಗುರವಾಗಿರುತ್ತದೆ. ಮತ್ತು ಈ

ಕುರ್ಚಿಗಳು ಈ ಮೇಲಿನ ಎಲ್ಲ ಗುಣಗಳನ್ನು ಹೊಂದಿರುತ್ತವೆ.

೬. ನೀವು (i) ಆಹಾರ ತ್ಯಾಜ್ಯ, (ii) ಮುರಿದ ಗಾಜು ಮತ್ತು (iii) ರದ್ದಿ ಕಾಗದವನ್ನು ಸಂಗ್ರಹಿಸಲು ಸಂಗ್ರಾಹಕಗಳನ್ನು ಹೊಂದಿರಬೇಕು. ಈ ರೀತಿಯ ತ್ಯಾಜ್ಯಗಳನ್ನು ಸಂಗ್ರಹಿಸಲು ನೀವು ಯಾವ ಸಾಮಗ್ರಿಗಳಿಂದ ತಯಾರಿಸಿದ ಸಂಗ್ರಾಹಕಗಳನ್ನು ಆಯ್ಕೆ ಮಾಡುತ್ತೀರಿ? ಸಾಮಗ್ರಿಗಳ ಯಾವ ಗುಣಗಳ
ಬಗ್ಗೆ ನೀವು ಯೋಚಿಸಬೇಕು?

ಆಹಾರ ತ್ಯಾಜ್ಯ.... ಸಂಗ್ರಹಿಸಲು ಪ್ಲಾಸ್ಟಿಕ್ ಅಥವಾ ಲೋಹದಿಂದ ಮಾಡಿದ ಸಂಗ್ರಹಕಗಳನ್ನು ಬಳಸಬಹುದು. ಇವು ಬಾಳಿಕೆ ಬರುವಂತೆ ಇರಬೇಕು. ಸುಲಭವಾಗಿ ಸ್ವಚ್ಛ ಮಾಡುವಂತಿರಬೇಕು.

ಮುರಿದ ಗಾಜು..... ಲೋಹದ ಅಥವಾ ಗಟ್ಟಿಯಾದ ಪ್ಲಾಸ್ಟಿಕ್ ನಿಂದ ಮಾಡಿದ ಸಂಗ್ರಹಕಗಳನ್ನು ಬಳಸಬಹುದು ಸೋರಿಕೆಯಲ್ಲದ ಸಂಗ್ರಹಕವಾಗಿರಬೇಕು.

ರದ್ದಿ ಕಾಗದ..... ಹಗುರವಾದ ಪ್ಲಾಸ್ಟಿಕ್ ಅಥವಾ ಫೈಬರ್ ಸಂಗ್ರಹಕಗಳನ್ನು ಬಳಸಬಹುದು.

೭. ಗಾಳಿಯು ನಮ್ಮ ಸುತ್ತಲೂ ಇದೆ ಆದರೆ ನಾವು ಒಬ್ಬರನ್ನೊಬ್ಬರು ನೋಡಲು ಅಡ್ಡಿಯಾಗುವುದಿಲ್ಲ. ಆದರೆ, ನಡುವೆ ಮರದ ಬಾಗಿಲು ಬಂದರೆ, ನಾವು ಒಬ್ಬರನ್ನೊಬ್ಬರು ನೋಡಲು ಸಾಧ್ಯವಿಲ್ಲ. ಏಕೆಂದರೆ
ಗಾಳಿಯು ಪಾರದರ್ಶಕ ಮತ್ತು ಮರದ ಬಾಗಿಲು ಅಪಾರ ದರ್ಶಕ. ಅತ್ಯಂತ ಸೂಕ್ತವಾದ ಉತ್ತರವನ್ನು ಆರಿಸಿ.

(i) ಪಾರದರ್ಶಕ, ಅಪಾರದರ್ಶಕ
(ii) ಅರೆಪಾರದರ್ಶಕ, ಪಾರದರ್ಶಕ
(iii) ಅಪಾರದರ್ಶಕ, ಅರೆಪಾರದರ್ಶಕ
(iv) ಪಾರದರ್ಶಕ, ಅರೆಪಾರದರ್ಶಕ

೮. ನಿಮ್ಮ ಬಳಿ X ಮತ್ತು Y ಎಂಬ ಎರಡು ನಿಗೂಢ ಸಾಮಗ್ರಿಗಳು ಇವೆ ಎಂದು ಕಲ್ಪಿಸಿಕೊಳ್ಳಿ. ನೀವು ಸಾಮಗ್ರಿ X ಅನ್ನು ಒತ್ತಲು ಪ್ರಯತ್ನಿಸಿದಾಗ, ಅದು ಕಠಿಣವೆಂದು ಭಾಸವಾಗುತ್ತದೆ ಮತ್ತು ಅದರ

ಆಕಾರವನ್ನು ಸುಲಭವಾಗಿ ಬದಲಾಯಿಸಲಾಗುವುದಿಲ್ಲ. ಮತ್ತೊಂದೆಡೆ, ನೀವು ಸಾಮಗ್ರಿ Y ಯನ್ನು ಒತ್ತಿದಾಗ ಸುಲಭವಾಗಿ ಆಕಾರವನ್ನು ಬದಲಾಯಿಸುತ್ತದೆ. ಈಗ, ನೀವು ಎರಡೂ ಸಾಮಗ್ರಿಗಳನ್ನು ನೀರಿನಲ್ಲಿ ಬೆರೆಸಿದಾಗ, ಸಾಮಗ್ರಿ X ಮಾತ್ರ ಸಂಪೂರ್ಣವಾಗಿ ವಿಲೀನವಾಗುತ್ತದೆ, ಆದರೆ ಸಾಮಗ್ರಿ Y ಬದಲಾಗದೆ ಉಳಿಯುತ್ತದೆ. X ಮತ್ತು Y ಯಾವ ರೀತಿಯ ಸಾಮಗ್ರಿಗಳಾಗಿರಬಹುದು? ಸಾಮಗ್ರಿ X ಗಟ್ಟಿಯಾಗಿದೆಯೇ ಅಥವಾ ಮೃದುವಾಗಿದೆಯೇ ಎಂದು ನೀವು ಗುರುತಿಸಬಲ್ಲಿರಾ? ಸಾಮಗ್ರಿ Y ಬಗ್ಗೆ ನಿಮ್ಮ ಅಭಿಪ್ರಾಯವೇನು? ನಿಮ್ಮ ಉತ್ತರವನ್ನು ಸಮರ್ಥಿಸಿ.

ಸಾಮಗ್ರಿ X ಬೆಲ್ಲವಾಗಿದೆ. ಇದು ಗಟ್ಟಿಯಾದ ವಸ್ತು ನಾವು ಒತ್ತಿದಾಗ ಗಟ್ಟಿಯಾಗಿರುತ್ತದೆ ಅದನ್ನು ನೀರಿನಲ್ಲಿ ಹಾಕಿದಾಗ ನೀರಿನಲ್ಲಿ ಸಂಪೂರ್ಣವಾಗಿ ಕರಗಿ ವಿಲೀನವಾಗುತ್ತದೆ.

ಸಾಮಗ್ರಿ Y ಸ್ಪಂಜು ಆಗಿದೆ. ಇದನ್ನು ಸುಲಭವಾಗಿ ಒತ್ತಿ ಅದರ ಆಕಾರವನ್ನು ಬದಲಾಯಿಸಬಹುದು. ಇದನ್ನು ನೀರಿನಲ್ಲಿ ಹಾಕಿದಾಗ ಅದು ಕರಗಿ ವಿಲೀನವಾಗುವುದಿಲ್ಲ.

೯. (i) ನಾನು ಯಾರು? ಕೊಟ್ಟಿರುವ ಗುಣಗಳ ಆಧಾರದ ಮೇಲೆ ನನ್ನನ್ನು ಗುರುತಿಸಿ.

(ಎ) ನನಗೆ ಹೊಳಪು ಇದೆ ________________ಲೋಹ (ಚಿನ್ನ ಬೆಳ್ಳಿ ಕಬ್ಬಿಣ ತಾಮ್ರ ಅಲ್ಯೂಮಿನಿಯಂ ಮೆಗ್ನೀಷಿಯಂ).

(ಬಿ) ನನ್ನನ್ನು ಸುಲಭವಾಗಿ ಸಂಕುಚಿಸಬಹುದು. ________________ಅನಿಲ.

(ಸಿ) ನಾನು ಗಟ್ಟಿಯಾಗಿದ್ದೇನೆ ಮತ್ತು ನೀರಿನಲ್ಲಿ ವಿಲೀನವಾಗಬಲ್ಲೆ _______________ಬೆಲ್ಲ ಅಥವಾ ಉಪ್ಪು.

(ಡಿ) ನೀವು ನನ್ನ ಮೂಲಕ ಸ್ಪಷ್ಟವಾಗಿ ನೋಡಲು ಸಾಧ್ಯವಿಲ್ಲ ________________ಅಪಾರ ದರ್ಶಕ ವಸ್ತು (ಗೋಡೆ ಮರ ಲೋಹದ ಹಾಳೆ).

(ಇ) ನನಗೆ ದ್ರವ್ಯರಾಶಿ ಮತ್ತು ಪರಿಮಾಣವಿದೆ ಆದರೆ ನೀವು ನನ್ನನ್ನು ನೋಡಲು ಸಾಧ್ಯವಿಲ್ಲ ______________________ಗಾಳಿ.

(ii) 'ನಾನು ಯಾರು?' ಎಂಬ ನಿಮ್ಮದೇ ಆದ ಒಗಟನ್ನು ರೂಪಿಸಿ.

ನಾನು ದ್ರವ ವಸ್ತು.
ನಾನು ನೀರಿನೊಂದಿಗೆ ವಿಲೀನವಾಗುವುದಿಲ್ಲ.
ನಾನು ಅಡುಗೆಯಲ್ಲಿ ಉಪಯೋಗಿಸಲ್ಪಡುವೆ.
ನಾನು ಹೆಚ್ಚಾಗಿ ಕರಿದ ಆಹಾರ ಮಾಡಲು ಬಳಸಲ್ಪಡುವೆ.

ನಾನು ಯಾರು ?

ಎಣ್ಣೆ

೧೦. ನಿಮಗೆ ಈ ಕೆಳಗಿನ ಸಾಮಗ್ರಿಗಳನ್ನು ಒದಗಿಸಲಾಗುತ್ತದೆ- ವಿನೆಗರ್, ಜೇನುತುಪ್ಪ, ಸಾಸಿವೆ ಎಣ್ಣೆ, ನೀರು, ಗ್ಲುಕೋಸ್ ಮತ್ತು ಗೋಧಿಹಿಟ್ಟು. ಒಂದು ಸಾಮಗ್ರಿಯು ಇನ್ನೊಂದರಲ್ಲಿ ವಿಲೀನವಾಗುವ
ಯಾವುದಾದರೂ ಎರಡು ಜೋಡಿಗಳನ್ನು ಮಾಡಿ. ಒಂದು ಸಾಮಗ್ರಿಯು ಇನ್ನೊಂದರಲ್ಲಿ ವಿಲೀನವಾಗದ ಎರಡು ಜೋಡಿಗಳನ್ನು ಮಾಡಿ.

ವಿಲೀನವಾಗುವ ಎರಡು ಜೋಡಿ.... ವಿನೆಗರ್ ಮತ್ತು ನೀರು,
ಗ್ಲುಕೋಸ್ ಮತ್ತು ನೀರು

ವಿಲೀನವಾಗದ ಎರಡು ಜೋಡಿ..... ಸಾಸಿವೆ ಎಣ್ಣೆ ಮತ್ತು ನೀರು, ಗೋಧಿ ಹಿಟ್ಟು ಮತ್ತು ನೀರು.